**Signature and Name of Invigilator**

1. (Signature) ____________

   (Name) ____________

2. (Signature) ____________

   (Name) ____________

**OMR Sheet No. :** ............................................
(To be filled by the Candidate)

**Roll No.** | | | | | | | | |
(In figures as per admission card)

**Roll No.** ____________
(In words)

**N 0 2 1 1 7**

# PAPER - II
# KANNADA

**Time : 1¼ hours]** **[Maximum Marks : 100**

Number of Pages in this Booklet : **12** | Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered on the OMR Sheet and the OMR Sheet Number should be entered on this Test Booklet.
4. Each item has four alternative responses marked (1), (2), (3) and (4). You have to darken the circle as indicated below on the correct response against each item.

   **Example :** ① ② ● ④ where (3) is the correct response.
5. Your responses to the items are to be indicated in the **OMR Sheet given inside the Booklet only.** If you mark your response at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, such as change of response by scratching or using white fluid, you will render yourself liable to disqualification.
9. You have to return the original OMR Sheet to the invigilators at the end of the examination compulsorily and must not carry it with you outside the Examination Hall. You are however, allowed to carry original question booklet and duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There are no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए।
2. इस प्रश्न-पत्र में पचास बहुविकल्पीय प्रश्न हैं।
3. परीक्षा प्रारम्भ होने पर, प्रश्न-पुस्तिका आपको दे दी जायेगी। पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए पुस्तिका पर लगी कागज की सील को फाड़ लें। खुली हुई या बिना स्टीकर-सील की पुस्तिका स्वीकार न करें।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं। दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें। इसके लिए आपको पाँच मिनट दिये जायेंगे। उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा।**
   (iii) इस जाँच के बाद प्रश्न-पुस्तिका का नंबर OMR पत्रक पर अंकित करें और OMR पत्रक का नंबर इस प्रश्न-पुस्तिका पर अंकित कर दें।
4. प्रत्येक प्रश्न के लिए चार उत्तर विकल्प (1), (2), (3) तथा (4) दिये गये हैं। आपको सही उत्तर के वृत्त को पेन से भरकर काला करना है जैसा कि नीचे दिखाया गया है।

   **उदाहरण :** ① ② ● ④ जबकि (3) सही उत्तर है।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं। यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा।
6. अन्दर दिये गये निर्देशों को ध्यानपूर्वक पढ़ें।
7. कच्चा काम (Rough Work) इस पुस्तिका के अन्तिम पृष्ठ पर करें।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं।
9. आपको परीक्षा समाप्त होने पर मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें। हालांकि आप परीक्षा समाप्ति पर मूल प्रश्न-पुस्तिका तथा OMR पत्रक की डुप्लीकेट प्रति अपने साथ ले जा सकते हैं।
10. **केवल नीले/काले बाल प्वाईंट पेन का ही प्रयोग करें।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है।**
12. **गलत उत्तरों के लिए कोई नकारात्मक अंक नहीं हैं।**



www.examrace.com

## KANNADA
## ಕನ್ನಡ
## PAPER - II
## ಪತ್ರಿಕೆ - II

**Note :** This paper contains **fifty (50)** objective type questions of **two (2)** marks each. **All** questions are **compulsory**.

**ಸೂಚನೆ :** ಈ ಪತ್ರಿಕೆಯಲ್ಲಿ **ಐವತ್ತು (50)** ವಸ್ತುನಿಷ್ಠ ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳಿರುತ್ತವೆ. **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿ.

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

**1.** 'ಧರ್ಮ್ಮವ ಕೆಡ್ಸಿದರಾದಡೆ ಗಂಗೆಯ ತಡಿಯಲಿ ಕಪಿಲೆಯನೂ ಬ್ರಾಹ್ಮಣದ ಪಾಪದಲ್ಲಿ ಹೋಹರು' ಎಂಬ ವಾಕ್ಯವಿರುವ ಶಾಸನ :
(1) ಗಂಗಾಧರಂ ಶಾಸನ
(2) ತಮ್ಮಟಕಲ್ಲು ಶಾಸನ
(3) ಬುಕ್ಕನ ಶ್ರವಣಬೆಳಗೊಳದ ಶಾಸನ
(4) ಬಾದಾಮಿ ಶಾಸನ

**2.** 'ಸರಸ್ವತಿ ಮಣಿಹಾರಂ' ಎಂದು ತನ್ನನ್ನೇ ಬಣ್ಣಿಸಿಕೊಂಡಿರುವ ಕವಿ :
(1) ಜನ್ನ
(2) ಪಂಪ
(3) ನಾಗವರ್ಮ
(4) ಬ್ರಹ್ಮಶಿವ

**3.** 'ಬಿದಿಯಂ ಮೀಱುಗುಮೆ ಪೆಱರ ಪೇೞ್ದುಪದೇಶಂ' ಎಂಬ ವಾಕ್ಯವಿರುವ ಕಾವ್ಯ :
(1) ಆದಿಪುರಾಣ
(2) ನೇಮಿನಾಥ ಪುರಾಣ
(3) ರಾಮಚಂದ್ರ ಚರಿತ ಪುರಾಣ
(4) ಚಾವುಂಡರಾಯ ಪುರಾಣ

**4.** 'ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೆ' ? ಎಂದು ಹೇಳಿದವನು :
(1) ಅಲ್ಲಮಪ್ರಭು
(2) ಚನ್ನಬಸವಣ್ಣ
(3) ಜೇಡರ ದಾಸಿಮಯ್ಯ
(4) ಸಿದ್ಧರಾಮ

**5.** "ನಾಗಿ, ಇದೇನವ್ವ ಬಿಸಿಲೊಳು ಕಣ್ಣೀರು ಸಾಗಿದ ಗಂಡನ ನೆನಪೆ ?" – ಈ ಕವನದ ಸಾಲು ಇವರದ್ದು :
(1) ಗೋಕಾಕ
(2) ಕುವೆಂಪು
(3) ಬೇಂದ್ರೆ
(4) ಪು.ತಿ.ನ.

**6.** 'ಜೀವನ ಸೌಂದರ್ಯ ಮತ್ತು ಸಾಹಿತ್ಯ' – ಕೃತಿಯ ಲೇಖಕರು :
(1) ಡಿ.ವಿ.ಜಿ.
(2) ಜಿ.ಎಸ್. ಶಿವರುದ್ರಪ್ಪ
(3) ಎಸ್.ಎಲ್. ಭೈರಪ್ಪ
(4) ಕೆ.ಎಸ್. ನರಸಿಂಹಸ್ವಾಮಿ

**7.** 'ಮೂರು ಉಪನ್ಯಾಸಗಳು' – ಎಂಬ ಗದ್ಯಕೃತಿಯ ಲೇಖಕರು :
(1) ಆರ್.ಸಿ. ಹಿರೇಮಠ
(2) ಗೋವಿಂದ ಪೈ
(3) ಆರ್. ನರಸಿಂಹಾಚಾರ್
(4) ರಂ.ಶ್ರೀ. ಮುಗಳಿ


www.examrace.com

8. ಬಿ.ಎಂ.ಶ್ರೀಯವರ ಮೇಲೆ ಪ್ರಭಾವ ಬೀರಿದ ಪಾಶ್ಚಾತ್ಯರು :
(1) ಸೊಫೊಕ್ಲಿಸ್
(2) ಲಿಯೋ ಟಾಲ್‌ಸ್ಟಾಯ್
(3) ಬ್ರೆಕ್ಟ್
(4) ಟಿ.ಎಸ್. ಎಲಿಯಟ್

9. ಸ್ಫೋಟವಾದವನ್ನು ಪ್ರತಿಪಾದಿಸುವ ಕೃತಿ :
(1) ಧ್ವನ್ಯಾಲೋಕ
(2) ಕಾವ್ಯಾಲಂಕಾರ
(3) ವಾಕ್ಯಪದೀಯ
(4) ವಕ್ರೋಕ್ತಿಜೀವಿತ

10. 'ಗುಣ' ಎಂಬ ಪರಿಕಲ್ಪನೆಯನ್ನು ಚರ್ಚಿಸಿದ ಲಾಕ್ಷಣಿಕ :
(1) ದಂಡಿ
(2) ರಾಜಶೇಖರ
(3) ವಾಮನ
(4) ಭಾಮಹ

11. 'ಫ್ಯಾನ್ಸಿ' (ಲಘು ಕಲ್ಪನೆ) ಎಂಬ ಪರಿಕಲ್ಪನೆಯನ್ನು ಚರ್ಚಿಸಿರುವ ಸಾಹಿತ್ಯ ವಿಮರ್ಶಕ :
(1) ಕೋಲ್‌ರಿಜ್
(2) ಕ್ರೋಚೆ
(3) ಲಾಂಜಿನಸ್
(4) ವರ್ಡ್ಸ್‌ವರ್ತ್

12. 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಕೃತಿಯ ಲೇಖಕರು :
(1) ಕೆ.ವಿ. ಸುಬ್ಬಣ್ಣ
(2) ಎಂ.ವಿ. ಸೀತಾರಾಮಯ್ಯ
(3) ಎಂ.ಎಂ. ಕಲಬುರ್ಗಿ
(4) ಆರ್. ನರಸಿಂಹಾಚಾರ್

13. 'ಸಮಾಜಶಾಸ್ತ್ರೀಯ ವಿಮರ್ಶೆ'ಗೆ ನಿಕಟವಾಗಿ ಸಂಬಂಧಿಸಿರುವ ವಿಮರ್ಶಾ ವಿಧಾನ :
(1) ಪ್ರಾಯೋಗಿಕ ವಿಮರ್ಶೆ
(2) ಸ್ತ್ರೀವಾದಿ ವಿಮರ್ಶೆ
(3) ರೂಪನಿಷ್ಠ ವಿಮರ್ಶೆ
(4) ಚಾರಿತ್ರಿಕ ವಿಮರ್ಶೆ

14. 'ಕರ್ಣಾಟಕ ವಿದ್ಯಾವರ್ಧಕ ಸಂಘ'ವು ಪ್ರಾರಂಭಿಸಿದ ಮಾಸ ಪತ್ರಿಕೆ :
(1) ಪ್ರಬುದ್ಧ ಕರ್ಣಾಟಕ
(2) ಸಾಧನೆ
(3) ವಾಗ್ಭೂಷಣ
(4) ಕರ್ಣಾಟಕ ಭಾರತಿ

15. 'ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು' ಕೃತಿಯನ್ನು ಬರೆದವರು :
(1) ಬೆಟಗೇರಿ ಕೃಷ್ಣಶರ್ಮ
(2) ಸೇಡಿಯಾಪು ಕೃಷ್ಣಭಟ್ಟ
(3) ಎಸ್.ವಿ. ಪರಮೇಶ್ವರಭಟ್ಟ
(4) ಕಡೆಂಗೊಡ್ಲು ಶಂಕರಭಟ್ಟ

16. 'ಕಲೆಗಾಗಿ ಕಲೆ ಅಲ್ಲ, ಮನುಷ್ಯನಿಗಾಗಿ ಕಲೆ' ಎಂದು ವಾದಿಸಿದವರು :
(1) ಅಭಿಜಾತವಾದ (ಕ್ಲಾಸಿಸಿಸಂ)
(2) ರಮ್ಯವಾದ (ರೊಮ್ಯಾಂಟಿಸಿಸಂ)
(3) ನವ ಅಭಿಜಾತವಾದ (ನಿಯೋ ಕ್ಲಾಸಿಸಿಸಂ)
(4) ನವ್ಯವಾದ (ಮಾರ್ಡನಿಸಂ)


www.examrace.com

17. 'ನೀ ನನಗೆ ಹೊಗಳಬೇಡ' – ಇಲ್ಲಿ ಕಾಣುವ ವಿಭಕ್ತಿ ಪಲ್ಲಟ :
(1) ಪ್ರಥಮಾರ್ಥದಲ್ಲಿ ದ್ವಿತೀಯ
(2) ದ್ವಿತೀಯಾರ್ಥದಲ್ಲಿ ಚತುರ್ಥಿ
(3) ತೃತೀಯಾರ್ಥದಲ್ಲಿ ಪಂಚಮಿ
(4) ಷಷ್ಠ್ಯರ್ಥದಲ್ಲಿ ಚತುರ್ಥಿ

18. ಗಮಕ ಸಮಾಸಕ್ಕೆ ಉದಾಹರಣೆಗಳು :
(1) ಸುಳ್ಳಾಡು, ಕಣ್ಣುತೆರೆ, ಮಳೆಬೆಳೆ
(2) ಮನೆಕಾರ್ಯ, ಅರಸುಕುಮಾರ, ಮಂಗಳಾರತಿ
(3) ಹರಟೆಮಲ್ಲ, ಹೊರಮೈ, ಉರಿಬೇಸಗೆ
(4) ಓದುವ ಹುಡುಗ, ಯಾವ ಮರ, ಬಿಳಿಯ ವಸ್ತ್ರ

19. ಇವು ಮಧ್ಯಮ ಪುರುಷ ಆಖ್ಯಾತ ಪ್ರತ್ಯಯಗಳು :
(1) ಎ, ಇರಿ, (2) ಎನು, ಎವು (3) ಅಲಿ, ಎವು (4) ಅರು, ಉವು

20. ಪೊಟ್ಟ, ತುಪ್ಪ, ಪೆಟ್ಟು ಮೊದಲಾದ ಪದಗಳ ಪ್ರಾಚೀನತಮ ಉಲ್ಲೇಖವಿಲ್ಲಿದೆ :
(1) ಗ್ರೀಕ್ ಪ್ರಹಸನಗಳು
(2) ಹಾಲರಾಜನ ಗಾಥಾ ಸಪ್ತಶತಿ
(3) ಹಲ್ಮಿಡಿ ಶಾಸನ
(4) ಅಶೋಕನ ಬ್ರಹ್ಮಗಿರಿಯ ಶಾಸನ

**ಬಹು ಆಯ್ಕೆಯ ಮಾದರಿಯ ಪ್ರಶ್ನೆಗಳು :**

21. ಇವು ರನ್ನನ ಕಾವ್ಯದ ಉಕ್ತಿಗಳು :
(a) 'ಮದುವೆಗಳುಪಿದಮನೆಯಂದದಿನಿರ್ದುದಯೋಧ್ಯಾನಗರಂ'
(b) 'ಅತ್ತಿಯ ಪಣ್ಗೊಳಿರ್ಪಪುಳುವಲ್ಲದೆ ಮಾನಸನೇ ಮುರಾಂತಕಾ'
(c) 'ಪವನಜನಾಸ್ಯಮಲ್ತಿದವನಾನನಮಪ್ಪೊಡೆಮಟ್ಟಮಿರ್ದು ನೋಡುವುದೆ'
(d) 'ಕರ್ಮವಿಪಾಕಮಾರ ಬಗೆಗಂ ವೈಕಲ್ಯಮಂ ತಾರದೇ'

ಇವುಗಳಲ್ಲಿ **ಸರಿಯಾದ** ಉತ್ತರ :
(1) (b) ಮತ್ತು (c) (2) (b) ಮತ್ತು (d) (3) (a) ಮತ್ತು (c) (4) (a) ಮತ್ತು (b)

22. ಇವು ಕೆ.ಎಸ್. ನರಸಿಂಹಸ್ವಾಮಿಯವರ ಕವನದ ಸಾಲುಗಳು :
(a) ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು.
(b) ತಗ್ಗಿರುವ ಕೊರಳಿನ ಸುತ್ತ ಕರಿಮಣಿಯೊಂದೆ
ಸಿಂಗಾರ ಕಾಣದ ಹೆರಳು
(c) ಏನು ಬಹುದೋ ಎಂದು, ಎನು ಬಹುದೋ ಎಂದು
ಏನು ಬಹುದೋ ಎಂದು, ನೊಂದು, ನೊಂದು
(d) ಇಂದು ಏನಾಗಿಹುದೆ, ಗೆಳತಿ
ಏಕೆ ಸಡಗರಗೊಳ್ವೆನೇ ?

ಇವುಗಳಲ್ಲಿ **ಸರಿಯಾದ** ಉತ್ತರ :
(1) (a) ಮತ್ತು (b) (2) (b) ಮತ್ತು (c) (3) (c) ಮತ್ತು (d) (4) (a) ಮತ್ತು (d)

23. ಇವು ಹರಿನಾರಾಯಣ ಆಪ್ಟೆಯವರ ಕೃತಿಗಳು :
(a) ವಜ್ರಘಾತ, ಭಾವಾನಂದ
(b) ಉಷ: ಕಾಲ, ಸೂರ್ಯಗ್ರಹಣ
(c) ಆನಂದಮಠ, ದುರ್ಗೇಶ ನಂದಿನಿ
(d) ಮೃಣಾಲಿನೀ, ಭಾವಾನಂದ

ಇವುಗಳಲ್ಲಿ **ಸರಿಯಾದ** ಉತ್ತರ :
(1) (a) ಮತ್ತು (c) (2) (c) ಮತ್ತು (d) (3) (a) ಮತ್ತು (b) (4) (b) ಮತ್ತು (d)



www.examrace.com

**24.** ಇವು ಎರಡನೆಯ ನಾಗವರ್ಮನ ಕೃತಿಗಳು :

(a) ಕರ್ನಾಟಕ ಕಾದಂಬರಿ

(b) ಕಾವ್ಯಾವಲೋಕನ

(c) ಛಂದೋಂಬುಧಿ

(d) ಕರ್ಣಾಟಕ ಭಾಷಾಭೂಷಣ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (d) (2) (b) ಮತ್ತು (d) (3) (b) ಮತ್ತು (c) (4) (c) ಮತ್ತು (d)

**25.** ಸಾಳ್ವನಿಂದ ರಚಿತವಾದ ಕಾವ್ಯಮೀಮಾಂಸೆಯ ಕೃತಿಗಳು :

(a) ರಸ ವಿವೇಕ

(b) ರಸ ರತ್ನಾಕರ

(c) ಅಪ್ರತಿಮ ವೀರ ಚರಿತ

(d) ಶಾರದಾ ವಿಲಾಸ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (c) (2) (a) ಮತ್ತು (d) (3) (b) ಮತ್ತು (d) (4) (c) ಮತ್ತು (d)

**26.** ಭಾರತೀಯ ಕಾವ್ಯ ಮೀಮಾಂಸೆ ಹಾಗೂ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಸಂವಾದಿ ಪರಿಕಲ್ಪನೆಗಳು :

(a) ಇಮ್ಯಾಜಿನೇಷನ್

(b) ವಕ್ರೋಕ್ತಿ

(c) ಪ್ರತಿಭೆ

(d) ಇನ್‌ಟ್ಯೂಷನ್

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (a) ಮತ್ತು (c) (3) (c) ಮತ್ತು (d) (4) (b) ಮತ್ತು (d)

**27.** ಇವು ಕನ್ನಡ ಭಾಷೆಯಲ್ಲಿ ಮೂಲಭೂತವಾಗಿ ಇಲ್ಲದ ವರ್ಣಗಳು :

(a) ಯ, ರ, ಲ

(b) ಶ, ಷ, ವಿಸರ್ಗ

(c) ಋ, ಖ, ಥ

(d) ಏ, ಓ, ಊ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (c) ಮತ್ತು (d) (3) (b) ಮತ್ತು (c) (4) (a) ಮತ್ತು (d)



www.examrace.com

**28.** ಪಠ್ಯಕೇಂದ್ರಿತವಾದ ವಿಮರ್ಶಾ ವಿಧಾನಗಳು :

(a) ರೂಪನಿಷ್ಠ ವಿಮರ್ಶೆ

(b) ಸಮಾಜಶಾಸ್ತ್ರೀಯ ವಿಮರ್ಶೆ

(c) ಮನಃಶಾಸ್ತ್ರೀಯ ವಿಮರ್ಶೆ

(d) ಪ್ರಾಯೋಗಿಕ ವಿಮರ್ಶೆ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (c) (2) (b) ಮತ್ತು (c) (3) (b) ಮತ್ತು (d) (4) (a) ಮತ್ತು (d)

**29.** ಇವು ಕನ್ನಡದ ಕಾಲವಾಚಕ ಕ್ರಿಯಾ ರೂಪಗಳು :

(a) ಕೇಳ್ದನ್, ಉದಯಿಸಿದನ್

(b) ಉಲಿಗುಂ, ಬೀಸುಗುಂ

(c) ತಿಳಿಯುವಳು, ನುಡಿಯುವುದು

(d) ಮಾಡರು, ಕೇಳನು

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (b) ಮತ್ತು (c) (3) (a) ಮತ್ತು (c) (4) (c) ಮತ್ತು (d)

**30.** ಇವರು ಪಾಶ್ಚಾತ್ಯ **'ಮಾಡರ್ನಿಸಂ'** ಪಂಥದ ಪ್ರಮುಖ ಚಿಂತಕರು :

(a) ಫ್ರಾಯ್ಡ್ ಜಾರ್ಜ್ ಲುಕಾಸ್

(b) ಕಾಫ್ಕಾ, ಬೊದಿಲೇರ್

(c) ಎಲಿಯಟ್, ಕೇಟ್ ಮಿಲೆಟ್

(d) ಸಾರ್ತ್ರೆ, ಎಜ್ರಾಪೌಂಡ್

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (b) ಮತ್ತು (c) (3) (c) ಮತ್ತು (d) (4) (b) ಮತ್ತು (d)



www.examrace.com

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ.**

**ಈ ಕೆಳಗಿನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ (31 ನೆಯ ಪ್ರಶ್ನೆಯಿಂದ 35 ನೆಯಪ್ರಶ್ನೆಯ ವರೆಗೆ)**

ಅಂತು ಮಹಾಶ್ವೇತೆ ಬೆಸಗೊಳೆ ಕಪಿಂಜಲನ್
ಬೆಸಗೊಳ್ವುದಱಿಂದಿದನು
ದ್ದೆಸಮಾವುದು ತರುಣಿ ನಿಮಗೆ ಕೌತುಕಮೆನೆ ಕೇ
ಳುಸಿರ್ದಪೆನೆಂದಾ ಮುನಿಪಂ
ನಸುನಗುತಂ ಪೇೞಲಾಗಳುದ್ಯತನಾದಂ ॥೧೩॥

ವ॥ ಅದೆಂತೆನೆ ಸಕಲ ಮುನಿವೃಂದವಂದಿತ ಚರಣನುಮಖಿಲಮುನಿಜನಾನಂದನುಮ ಪ್ಪೊರ್ಬ ಶ್ವೇತಕೇತುವೆಂಬ ಮಹಾಮುನಿ ಕುಮಾರನಂ ಕೈಕೊಂಡು ಬಾಲಜನ್ಮೋಚಿತ ಕ್ರಿಯೆಗಳಂ ಮಾಡಿ ಪುಂಡರೀಕನೆಂದು ಪೆಸರನಿಟ್ಟು ಅಖಿಳವಿದ್ಯಾಕಲಾಪದೊಳ್ ಪರಿಣಿತನಂ ಮಾಡಿ ಯತಿತ್ವಮಂ ಕೈಕೊಳಿಸೆ ತದನುಷ್ಠಾನ ಪರಾಯಣನಾದ ಮಹಾನು ಭಾವನೀತಂಗೀ ವ್ರತವಿರುದ್ಧಮಪ್ಪ ಕುಸುಮ ಮಂಜರಿಯೆಂತು ಬಂದುದೆಂಬೆಯಪ್ಪೊಡೆ

ಇಂದು ಚತುರ್ದಶಿಯಪ್ಪುದ
ಱಿಂದಂ ಕೈಲಾಸವಾಸಿಯಂ ಕಾಣಲ್ಕಾ
ನಂದದೆ ದಿವದಿಂದಿರ್ಬರು
ಮೊಂದಾಗಿ ಬರುತ್ತಮಿರ್ಪುದಂ ತತ್ಕ್ಷಣದೊಳ್ ॥೧೪॥

ಕುಸುಮ ವಿಭೂಷಣಾನ್ವಿತೆ ನವಪ್ರಸವಾಸವಪಾನಮತ್ತೆ ರಂ
ಜಿಸುವ ವಸಂತಲಕ್ಷ್ಮಿಯ ಕರಾಗ್ರದೊಳಿಕ್ಕಿ ನಖಾಂಶು ಜಾಲಮಂ
ಪಸರಿಸುತಿರ್ಪ ತನ್ನ ಕರಮಂ ವನದೇವತೆ ಪಾರಿಜಾತದೊಂ
ದೆಸೆವಲರ್ಗೊಂಚಲಂ ಪಿಡಿದು ನಂದನದೊಳ್
ಬರುತೊರ್ವಳೊಪ್ಪಿದಳ್ ॥೧೫॥

ವ॥ ಅಂತು ಬಂದು ಪೊಡಮಟ್ಟು ಭುವನತ್ರಯಾಭಿರಾಮಮಪ್ಪ ನಿನ್ನ ಸೌಕುಮಾರ್ಯಕ್ಕೆ ತಕ್ಕಲಂಕಾರಮೀ ದಿವ್ಯಕುಸುಮಮಂಜರಿಯನವತಂಸಂ ಮಾಡಿ, ಪಾರಿಜಾತ ಜನ್ಮಮಂ ಸಫಲಂ ಮಾಲ್ಪುದೆಂದು ಬಿನ್ನವಿಸೆ ನಿಜರೂಪಸ್ತುತಿಗೆ ಲಜ್ಜಿಸಿ ಕೇಳದಂತೆ ಪೋಗೆ ಮತ್ತೆ ಬೆನ್ನನೆ ಪತ್ತಿ ಬರುತಿರ್ಪುದುಮಾಂ ಕಂಡು ಕಾರುಣ್ಯದಿಂದೀ ಕಾಂತೆಗೆ ಸಂತೋಷಮಂ ಮಾಡಿಮೆನಲಿದೇಕೆ ಬೇಡವೇಡೆನೆಯಂ ಕಿವಿಯೊಳ್ ತೊಡರ್ಚಿ ಪೋದಳೀ ಕುಸುಮ ಮಂಜರಿಯನೆಂದು ಸಹಚರ ಮುನಿ ಪೇೞೆ ಪುಂಡರೀಕಂ ದರಹಸಿತಾಧರ ಕಪೋಲತಲನಾಗಿ

ಎಳಸುತ್ತಿರ್ದಪೆ ಪುಷ್ಪಮಂಜರಿಗೆ ಕೊಳ್ಳೀಸುತ್ತಿದೇಕೆಂದು ಸಂ
ಚಳಿಸುತ್ತಂ ನಿಜಕರ್ಣದಿಂ ತೆಗೆದು ಸೋಲ್ತೆಂ ಕೂಡು ನೀನೆನ್ನೊಳೆಂ
ದಳಿಮಾಲಾರವದಿಂದೆ ಪೇೞ್ವ ತೆಱದಿಂ ಮತ್ಕರ್ಣದೊಳ್ ತಾರಕೋ
ಜ್ವಳಮಂ ರಂಜಿಪ ಪುಷ್ಪ ಮಂಜರಿಯನತ್ಯೌತ್ಸುಕ್ಯದಿಂದಿಕ್ಕಿದಂ ॥೧೬॥

31. 'ಕಾರುಣ್ಯದಿಂದೀ ಕಾಂತೆಗೆ ಸಂತೋಷಮಂ ಮಾಡಿಂ' ಎಂದು ಹೇಳಿದವರು :
(1) ಕಪಿಂಜಲ (2) ಪುಂಡರೀಕ (3) ಶ್ವೇತಕೇತು (4) ಮಹಾಶ್ವೇತೆ



www.examrace.com

32. 'ಬೆಸಗೊಳ್ಳುವ ಉದ್ದೆಸಮಾವುದು' ಎಂದು ಯಾರನ್ನು ಉದ್ದೇಶಿಸಿ ಕೇಳಲಾಗಿದೆ ?
(1) ಪುಂಡರೀಕನನ್ನು (2) ಕಪಿಂಜಲನನ್ನು (3) ಮಹಾಶ್ವೇತೆಯನ್ನು (4) ವನದೇವತೆಯನ್ನು

33. ಯಾವುದನ್ನು ವ್ರತಕ್ಕೆ ಸಲ್ಲದ ನಡತೆ ಎನ್ನಲಾಗಿದೆ ?
(1) ಹೂಗೊಂಚಲನ್ನು ಮುಡಿಯಲ್ಲಿ ಸೂಡಿದುದು
(2) ಹೂಗೊಂಚಲನ್ನು ಕಿವಿಯಲ್ಲಿ ಇಟ್ಟುಕೊಂಡುದು
(3) ಹೂಗೊಂಚಲನ್ನು ತಿರಸ್ಕರಿಸಿದುದು
(4) ಹೂಗೊಂಚಲನ್ನು ಹೊಸಕಿ ಹಾಕಿದುದು

34. ದುಂಬಿಗಳ ಧ್ವನಿ ಯಾವುದನ್ನು ಸಾರುವಂತಿತ್ತು ?
(1) ನೀನು ನನ್ನ ವ್ರತಕ್ಕೆ ವಿರುದ್ಧವಾದವಳು
(2) ನಿನ್ನನ್ನು ಎಂದಿಗೂ ಸೇರೆನು
(3) ನೀನು ಸಂಯಮವನ್ನು ಮೀರುವುದು ಸರಿಯಲ್ಲ
(4) ನಿನಗೆ ಸೋತು ಹೋದೆನು, ನನ್ನೊಡನೆ ಸೇರು

35. ಈ ಕಾವ್ಯಭಾಗದಲ್ಲಿ ಬಂದ 'ಎಳಸು' ಪದದ ಅರ್ಥ :
(1) ಹೀಚು (2) ಬಯಸು (3) ಎಳೆ (4) ಬಳಸು

**ಹೇಳಿಕೆ–ವಿವರಣೆ ಆಧಾರಿತ ಬಹುಆಯ್ಕೆಯ ಮಾದರಿ :**

36. **ಹೇಳಿಕೆ :** 'ಗಿಳಿಯ ಹಂಜರವಿಕ್ಕಿ ಸೊಡರಿಂಗೆಣ್ಣೆಯನೆರೆದು,
ಬತ್ತಿಯನಿಕ್ಕಿ ಬರವ ಹಾರುತ್ತಿದ್ದೆನಯ್ಯಾ'.
**ವಿವರಣೆ :** ಪಂಜರಕ್ಕೆ ಗಿಳಿಬರಲೆಂದು ದೀಪವನ್ನು ಹಚ್ಚಿ ಕಾಯುತ್ತಿದ್ದೇನೆ.
(1) ಹೇಳಿಕೆ ಸರಿ, ವಿವರಣೆ ಸರಿ (2) ಹೇಳಿಕೆ ಸರಿ, ವಿವರಣೆ ತಪ್ಪು
(3) ಹೇಳಿಕೆ ತಪ್ಪು, ವಿವರಣೆ ತಪ್ಪು (4) ಹೇಳಿಕೆ ತಪ್ಪು, ವಿವರಣೆ ಸರಿ

37. **ಹೇಳಿಕೆ :** 'ನಾನೃಷಿಃ ಕುರುತೇ ಕಾವ್ಯಂ'
**ವಿವರಣೆ :** ದಾರ್ಶನಿಕನಲ್ಲದವ ಕಾವ್ಯರಚನೆ ಮಾಡಲಾರ
(1) ಹೇಳಿಕೆ ಸರಿ, ವಿವರಣೆ ತಪ್ಪು (2) ಹೇಳಿಕೆ ತಪ್ಪು, ವಿವರಣೆ ಸರಿ
(3) ಹೇಳಿಕೆ ಸರಿ, ವಿವರಣೆ ಸರಿ (4) ಹೇಳಿಕೆ ತಪ್ಪು, ವಿವರಣೆ ತಪ್ಪು

38. **ಹೇಳಿಕೆ :** 'ಬಾಗಿಲೊಳು ಕೈಮುಗಿದು ಒಳಗೆ ಬಾ, ಯಾತ್ರಿಕನೆ
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು.'
**ವಿವರಣೆ :** ದೇವರ ಗುಡಿಯಲ್ಲಿ ಆರಾಧಿಸಬೇಕಾಗಿರುವುದು, ಕಲೆಯನ್ನೇ ಹೊರತು ದೇವರನ್ನು ಅಲ್ಲ.
(1) ಹೇಳಿಕೆ ಸರಿ, ವಿವರಣೆ ತಪ್ಪು (2) ಹೇಳಿಕೆ ಸರಿ, ವಿವರಣೆ ಸರಿ
(3) ಹೇಳಿಕೆ ತಪ್ಪು, ವಿವರಣೆ ತಪ್ಪು (4) ಹೇಳಿಕೆ ತಪ್ಪು, ವಿವರಣೆ ಸರಿ

39. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?
(1) ಪಂಪ – ಸತ್ಯಾಶ್ರಯ
(2) ಭೀಮಕವಿ – ಮಲ್ಲಿನಾಥಪುರಾಣ
(3) ದುರ್ಗಸಿಂಹ – ಕರ್ಣಾಟಕ ಪಂಚತಂತ್ರ
(4) ಆಂಡಯ್ಯ – ಧರ್ಮಾಮೃತ


www.examrace.com

40. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಬೇಂದ್ರೆ – ಹನಿಯನು ನಾನು ಅನುಭವಿಸುವ ಪ್ರೀತಿ
ಆ ಹನಿ ನನ್ನನು ರಮಿಸುವ ರೀತಿ.

(2) ಅಡಿಗ – ಓ ಬನ್ನಿ, ಜನವೇ, ಕನ್ನಡ ಹೊಲದ ತೆನೆತೆನೆಯೆ
ಕೂಡುತಿಹ ಕನ್ನಡದ ಹಾಲ ಕೆನೆಯೇ.

(3) ಗೋಕಾಕ (ವಿನಾಯಕ) – ಕಿನ್ನರ – ಕಿಂಪುರುಷರ ನೌಕೆಗಳಂತೆ
ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ.

(4) ಚಂದ್ರಶೇಖರ ಕಂಬಾರ – ಮೂಡಣದ ಮುದಿಕುರುವೊಡೆದು ನೆತ್ತರು ಕೀವು ಸೋರಿತೊ,
ಸುರುವಾಯ್ತಿಲ್ಲಿ ಚಲನೆ.

41. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ ?

(1) ಕನಕದಾಸ – 'ನೀನುಪೇಕ್ಷೆಯ ಮಾಡೆ ಬೇರೆ ಗತಿಯಾರೆನಗೆ'
(2) ರತ್ನಾಕರವರ್ಣಿ – 'ಸಿಕ್ಕಿದಂತಿಹನು ಸಿಕ್ಕನು ರತಿಸುಖದಲ್ಲಿ'
(3) ಷಡಕ್ಷರಿ – 'ನಾಣ್ಣುಡಿ ದೇಸಿವೆತ್ತ ಪೊಸನುಡಿ ಮಾರ್ಗಂ'
(4) ಕುಮಾರವಾಲ್ಮೀಕಿ – 'ವನಿತೆಯುತ್ತರದಲಗು ನಾಟಿತು ಜನಪನುರವನು'

42. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ ?

(1) 'ಶಬ್ದಾರ್ಥ ಸಹಿತೌ ಕಾವ್ಯಂ' – ಕಾವ್ಯಾಲಂಕಾರ
(2) 'ವಾಕ್ಯಂರಸಾತ್ಮಕಂ ಕಾವ್ಯಂ' – ಸಾಹಿತ್ಯ ದರ್ಪಣ
(3) 'ಕಾವ್ಯಾಸಾತ್ಮಾ ಧ್ವನಿ:' – ಧ್ವನ್ಯಾಲೋಕ
(4) 'ರೀತಿರಾತ್ಮಾ ಕಾವ್ಯಸ್ಯ' – ಕಾವ್ಯಪ್ರಕಾಶ

43. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಮಹತ್ ಲಿಂಗ – ಅಣ್ಣ, ತಮ್ಮ
(2) ಆತ್ಮಾರ್ಥಕ ಸರ್ವನಾಮ – ನಾನು, ನಾವು
(3) ಮುಕ್ತ ಆಕೃತಿಮಾ – ಬೆರಳು, ಹಾವು
(4) ಅಮಹತ್ ಲಿಂಗ – ಬೆಕ್ಕು, ಹುಲಿ

**ಬಹು ಆಯ್ಕೆಯ ಜೋಡಣೆ :**

44. (a) ರನ್ನ (i) 'ಮಾನವ ಸುಖದ ನಿಮಿತ್ತದಿಂ ತಪಂಗೆಯ್ವರ್'
(b) ಬಸವಣ್ಣ (ii) 'ಬಯಲು ಬತ್ತಲೆನಿಂದಡೆ ಏನನುಡಿಸುವಿರಯ್ಯ'
(c) ಅಲ್ಲಮಪ್ರಭು (iii) 'ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ'
(d) ಪೊನ್ನ (iv) 'ಕುರುಶಾಬಾನುಜರ ನೆತ್ತರಂ ಕುಡಿದೆಂ'
(v) 'ಜೀವದಯೆ ಜೈನಧರ್ಮಂ'

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (i) | (ii) | (iii) |
| (2) | (v) | (ii) | (iv) | (i) |
| (3) | (iv) | (iii) | (ii) | (i) |
| (4) | (i) | (iv) | (ii) | (iii) |



www.examrace.com

45. (a) ಗಿರೀಶ ಕಾರ್ನಾಡ (i) ಟೊಳ್ಳು – ಗಟ್ಟಿ
(b) ಮಾಸ್ತಿ (ii) ಅಗ್ನಿ ಸಾಕ್ಷಿ
(c) ಶ್ರೀರಂಗ (iii) ತೆರೆಗಳು
(d) ಪಿ. ಲಂಕೇಶ (iv) ಯಶೋಧರಾ
(v) ಒಡಕಲುಬಿಂಬ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (v) | (i) | (ii) | (iii) |
| (2) | (i) | (iv) | (iii) | (v) |
| (3) | (ii) | (iv) | (v) | (iii) |
| (4) | (v) | (iv) | (ii) | (iii) |

46. (a) ಎ.ಆರ್. ಕೃಷ್ಣಶಾಸ್ತ್ರಿ (i) ಕಾವ್ಯಾನಂದ
(b) ಸಿದ್ದಯ್ಯ ಪುರಾಣಿಕ (ii) ಶ್ರೀಪತಿ
(c) ರಂ.ಶ್ರೀ. ಮುಗಳಿ (iii) ಆನಂದಕಂದ
(d) ಬೆಟಗೇರಿ ಕೃಷ್ಣಶರ್ಮ (iv) ರಸಿಕರಂಗ
(v) ಮಧುರಚೆನ್ನ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (ii) | (i) | (iv) | (iii) |
| (2) | (ii) | (iv) | (i) | (v) |
| (3) | (iv) | (i) | (iii) | (ii) |
| (4) | (iii) | (i) | (ii) | (iv) |

47. (a) ಪೋರ್ಚುಗೀಸ್ (i) ಲಗಾಮು, ಮೇಸ್ತ್ರಿ
(b) ಅರೆಬಿಕ್ (ii) ಠಾಣೆ, ಲಾವಣಿ
(c) ಫಾರಸಿ (iii) ವಿವಾಹ, ಉತ್ಸವ
(d) ಮರಾಠಿ (iv) ಪಗಾರ, ಇಸ್ತ್ರಿ
(v) ಗಲೀಜು, ತಕರಾರು

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (ii) | (iii) | (i) | (iv) |
| (2) | (iii) | (i) | (v) | (iv) |
| (3) | (iv) | (v) | (i) | (ii) |
| (4) | (iv) | (i) | (ii) | (v) |



www.examrace.com

**ಅನುಕ್ರಮ ಮಾದರಿ : ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ :**

**48.** (1) ಜಗನ್ನಾಥವಿಜಯ, ಚಾವುಂಡರಾಯಪುರಾಣ, ಭರತೇಶ ವೈಭವ, ರಾಜಶೇಖರವಿಳಾಸ
(2) ಚಾವುಂಡರಾಯಪುರಾಣ, ಜಗನ್ನಾಥವಿಜಯ, ರಾಜಶೇಖರವಿಳಾಸ, ಭರತೇಶ ವೈಭವ
(3) ರಾಜಶೇಖರವಿಳಾಸ, ಜಗನ್ನಾಥವಿಜಯ, ಭರತೇಶ ವೈಭವ, ಚಾವುಂಡರಾಯಪುರಾಣ
(4) ಭರತೇಶ ವೈಭವ, ಜಗನ್ನಾಥವಿಜಯ, ಚಾವುಂಡರಾಯಪುರಾಣ, ರಾಜಶೇಖರವಿಳಾಸ

**49.** (1) ರೀತಿ, ಧ್ವನಿ, ಔಚಿತ್ಯ, ಅಲಂಕಾರ
(2) ಅಲಂಕಾರ, ರೀತಿ, ಧ್ವನಿ, ಔಚಿತ್ಯ
(3) ಧ್ವನಿ, ಅಲಂಕಾರ, ರೀತಿ, ಔಚಿತ್ಯ
(4) ರೀತಿ, ಧ್ವನಿ, ಅಲಂಕಾರ, ಔಚಿತ್ಯ

**50.** (1) ವಾಗ್ದೇವಿ, ಇಂದಿರಾ, ಆಂಗ್ಲ ಕವಿತಾಸಾರ, ಚೋಮನದುಡಿ
(2) ಆಂಗ್ಲ ಕವಿತಾಸಾರ, ವಾಗ್ದೇವಿ, ಇಂದಿರಾ, ಚೋಮನದುಡಿ
(3) ಇಂದಿರಾ, ವಾಗ್ದೇವಿ, ಆಂಗ್ಲ ಕವಿತಾಸಾರ, ಚೋಮನದುಡಿ
(4) ಇಂದಿರಾ, ಚೋಮನದುಡಿ, ವಾಗ್ದೇವಿ, ಆಂಗ್ಲ ಕವಿತಾಸಾರ

- o O o -



www.examrace.com

**Space For Rough Work**

Exam Race



www.examrace.com